ನಾವು ಜಾರಿಗೆ ತಂದಿದ್ದೇವೆ ಮತ್ತು ಇವತ್ತಿನವರೆಗೂ ಪಜಿಲೆನ್ಸ್ ಕಮಿಷನ್‌ನಲ್ಲಿ ಸಿಕ್ಕಿಹಾಕಿಕೊಂಡು ತನಿಖೆಯಲ್ಲಿ ಸರಿ ಎಂದು ಗೊತ್ತಾದರೆ ಅವರು ಯಾವ ಶಿಕ್ಷೆಯನ್ನು ಕೊಡಬೇಕೋ ಎಂದು ಹೇಳುತ್ತಾರೋ ಅದರಂತೆ ತಾವು ಇಂದು ಏನೂ ಕಡಿಮೆ ಮಾಡಿಲ್ಲ. ಇನ್ನು ಹೆಚ್ಚು ಮಾಡಿದ್ದೇವೆ.

ಸರ್ಕಾರಿ ನೌಕರರ ವರ್ಗಾವಣೆ ಬಗ್ಗೆ

೧೩೭. ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ).—ಮಾನ್ಯ ಮುಖ್ಯಮಂತ್ರಿಗಳು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ೧೯೮೫-೮೬ನೇ ಸಾಲಿನಲ್ಲಿ ಸರಕಾರಿ ನೌಕರರನ್ನು ಅವಧಿಗೆ ಮುನ್ನ ಹಾಗೂ ಅವಧಿ ಮುಗಿದ ನಂತರ ವರ್ಗಾವಣೆ ಮಾಡಿರುವ ನೌಕರರ ಸಂಖ್ಯೆ ಎಷ್ಟು ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು).—

(ಅ) ಲಭ್ಯ ಇಲಾಖೆಗಳಿಂದ ಬಂದಿರುವ ಮಾಹಿತಿಯ ಪ್ರಕಾರ ೧೯೮೫-೮೬ನೇ ಸಾಲಿನಲ್ಲಿ ಇದುವರೆಗೆ ಮಾಡಿರುವ ಒಟ್ಟು ಸರ್ಕಾರೀ ನೌಕರರ ವರ್ಗಾವಣೆಗಳ ಸಂಖ್ಯೆ ೧೩,೯೬೦. ಇದರಲ್ಲಿ ೩,೭೬೦ ಸರ್ಕಾರೀ ನೌಕರರನ್ನು ಅವಧಿ ಪೂರ್ವವಾಗಿ ವರ್ಗಾಯಿಸಲಾಗಿದೆ. ಹಾಗೂ ೧೦-೨೩೦ ಸರ್ಕಾರೀ ನೌಕರರನ್ನು ಅವರು ಒಂದೇ ಸ್ಥಳದಲ್ಲಿ ಇರಬೇಕಾದ ಕನಿಷ್ಠ ಅವಧಿಯಂತೆ ಮುಗಿದ ನಂತರ ವರ್ಗಾಯಿಸಲಾಗಿದೆ.

ಶ್ರೀ ಬಿ.ಆರ್. ನೀಲಕಂಠಪ್ಪ.—ಮಾನ್ಯ ಅಧ್ಯಕ್ಷರೇ, ಅವಧಿ ಪೂರ್ಣ ಮತ್ತು ಅವಧಿ ನಂತರ ಇದರಲ್ಲಿ ಮುಖ್ಯವಾಲು ಭಾಗ ಅವಧಿ ಒಳಗೆ ವರ್ಗವಾಗಿದೆ ಎಂದು ಹೇಳಿದ್ದೀರಿ. ಆದ್ದರಿಂದ ಈ ಕಟ್ಟು ಪಾಡಿನನ್ನು ಪತಕ್ಕೆ ಅವಧಿಪೂರ್ಣ ಎಂದು ಇಟ್ಟುಕೊಳ್ಳುವುದು. ಈ ಕಟ್ಟುಪಾಡಿನಿಂದ ರಾಜ್ಯದ ಬೊಕ್ಕಸಕ್ಕೆ ಬಹಳ ಅನ್ಯಾಯವಾಗುತ್ತದೆ. ಇನ್ನೊಂದು ಮೂಲ ಸೂಚನೆ ಏನೆಂದರೆ ಅವಧಿ ಪೂರ್ಣ. ಅವಧಿ ನಂತರ ಎಂದು ಈ ಅಧಿಕಾರಿಗಳಿಗೆ ಏನು ಹಾಕಿದ್ದೀರಿ ? ಆದೇ ರೀತಿ ಇಷ್ಟಿಷ್ಟು ಅವಧಿಯೊಳಗೆ ಕಡತಗಳನ್ನು ವಿಲೇವಾರಿ ಮಾಡಬೇಕೆಂಬ ಕಾರ್ಯಕ್ರಮವನ್ನು ಹಾಕಿಕೊಂಡಲ್ಲಿ ಕೆಲಸಗಳು ಸುಸೂತ್ರವಾಗಿ ನಡೆಯುತ್ತವೆ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳುತ್ತೀರಿ ?

ಶ್ರೀ ರಾಮಕೃಷ್ಣ ಹೆಗಡೆ.—ಈಗ ಅವಧಿ ಪೂರ್ಣ ವರ್ಗಾವಣೆಯನ್ನು ಮಾಡಲೇ ಕೂಡದು ಎಂದು ಹೇಳತಕ್ಕಂಥ ನಿಯಮ ಕಟ್ಟುನಿಟ್ಟಾಗಿ ಜಾರಿಯಲ್ಲಿ ತರುವುದಕ್ಕೆ ಸಾಧ್ಯವಾಗುವುದಿಲ್ಲ. ಕೆಲವು ಸಂದರ್ಭದಲ್ಲಿ ಪ್ರಮೋಷನ್ ಆಗುತ್ತದೆ. ಪ್ರಮೋಷನ್ ಆಗಿ ಜಾಗ ಖಾಲಿಯಾಗುತ್ತದೆ. ಆ ಜಾಗವನ್ನು ತುಂಬಲಿಕ್ಕೆ ಒಬ್ಬರನ್ನು ಮತ್ತೊಂದು ಕಡೆಗೆ ವರ್ಗಮಾಡ ಬೇಕಾಗುತ್ತದೆ. ಕೆಲವು ಸಂದರ್ಭದಲ್ಲಿ ಸರ್ಕಾರಿ ನೌಕರರ ಮೇಲೆ ತಿಸ್ತಿನ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಸಸ್ಪೆಂಡ್ ಮಾಡುತ್ತೇವೆ. ಆ ರೀತಿ ಮಾಡಿದಲ್ಲಿ ಆ ಜಾಗ ಖಾಲಿಯಾಗುತ್ತದೆ. ಆಗ ಒಂದು ಜಾಗದಲ್ಲಿದ್ದವರನ್ನು ಮತ್ತೊಂದು ಜಾಗದಲ್ಲಿ ಹಾಕಬೇಕಾಗುತ್ತದೆ. ಅನೇಕ ಸರ್ಕಾರಿ ನೌಕರರು ಗಂಡ ಹೆಂಡತಿ ಒಂದು ಕಡೆ ಇಲ್ಲದವರಿಗೆ ನವಂಗೆ ತೊಂದರೆ ಇದೆ ಎಂದು ಕಡೆ ಹಾಕಿ ಎಂದು ಕೇಳಿದರೆ ಆಗ ಮಾನವೀಯ ದೃಷ್ಟಿಯಿಂದ ವರ್ಗ ಮಾಡತಕ್ಕಂಥ ಪ್ರಸಂಗ ಬರುತ್ತದೆ. ಒಬ್ಬ ಸರ್ಕಾರಿ ನೌಕರನ ತಂದೆ ತಾಯಿ ಕ್ಯಾನ್ಸರ್ ರೋಗದಿಂದ ಬಳಲುತ್ತಿದ್ದಾರೆ ಪಂತ್ತು ಅವರು ಬೆಂಗಳೂರಿನ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಇದ್ದಾರೆ, ಇಲ್ಲಿ ಅವರಿಗೆ ಟ್ರೀಟ್‌ಮೆಂಟ್ ಆಗಬೇಕಂ. ಆಗ ಬಂದು ಕೇಳಿಕೊಳ್ಳುತ್ತಾರೆ. ಅಂಥ ಸಂದರ್ಭದಲ್ಲಿ ವರ್ಗ ಮಾಡುವಂಥ ಪ್ರಸಂಗ ಬರುತ್ತದೆ. ಕೆಲವು ಸಂದರ್ಭದಲ್ಲಿ ಮಾನ್ಯ ಶಾಸಕರ ಅಭಿಪ್ರಾಯಕ್ಕೆ ಗೌರವ ಕೊಟ್ಟು ವರ್ಗ ಮಾಡುವಂಥ ಪ್ರಸಂಗ ಬರುತ್ತದೆ.

ಶ್ರೀ ಆರ್.ಎನ್. ನಾಯಕ್.—ಅಧ್ಯಕ್ಷರೆ.....

ಅಧ್ಯಕ್ಷರು.—ನಾನು ನಿಮಗೆ ಅವಕಾಶ ಕೊಟ್ಟಿಲ್ಲ. ಮುಂದಿನ ಪ್ರಶ್ನೆ ವೇದಾಂತ ಹೆಮ್ಮಿಗೆಯವರದಂ. ನಿಮ್ಮ ಪ್ರಶ್ನೆ ಕೇಳಿರಿ.